ಸಂಖ್ಯೆ: ಆರ್.ಎಸ್.ಆರ್:ಸೌಕಾ:136/ನೋ:051/2001-02

www.souharda.coop
email : souharda@souharda.coop

Karnataka State Souharda Federal Cooperative Limited
Nirmana Bhavan, Dr. Rajkumar Road
1st Block, Rajajinagar, Bengaluru-560010
(ದೂ) 080-23378375-80

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

ನಿರ್ಮಾಣ ಭವನ, ಡಾ. ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

A Statutory body under Karnataka Souharda Sahakari Act 1997

ಸಂ:ಸಂಸ/ಆಡಳಿತ/ಚುನಾವಣೆ/57/2016-17 ದಿನಾಂಕ:11.11.2016

**ಇವರಿಗೆ,**

ರಾಜ್ಯದ ಎಲ್ಲಾ ಜಿಲ್ಲೆಗಳ
ಮಾನ್ಯ ಸಹಕಾರಿಗಳ ಉಪನಿಬಂಧಕರುಗಳಿಗೆ,

**ಮಾನ್ಯರೇ,**

**ವಿಷಯ: ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ ಕುರಿತು.**

**ಉಲ್ಲೇಖ: ದಿನಾಂಕ 08.11.2016ರ ಮಾನ್ಯ ಪ್ರಾದೇಶಿಕ ಆಯುಕ್ತರ ಸಂಖ್ಯೆ ಚುನಾವಣೆ/ವಿವ/42/2015-16.**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಚುನಾವಣೆಯನ್ನು ದಿನಾಂಕ 27.11.2016ರಂದು ನಡೆಸಲು ನಿಗದಿಪಡಿಸಿ ಅಧಿಕೃತ ಜ್ಞಾಪನವನ್ನು ಮಾನ್ಯ ಪ್ರಾದೇಶಿಕ ಆಯುಕ್ತರು ನೀಡಿರುತ್ತಾರೆ. ಹಾಗೂ ಈ ಚುನಾವಣೆಗೆ ಸಂಬಂಧಿಸಿದಂತೆ ತಮ್ಮ ವ್ಯಾಪ್ತಿಯಲ್ಲಿರುವ ಸೌಹಾರ್ದ ಸಹಕಾರಿಗಳ ಡೆಲಿಗೇಟನ್ನು ಆಯ್ಕೆ ಮಾಡಿದ ಆಡಳಿತ ಮಂಡಲಿ ನಡವಳಿಯನ್ನು ಹಾಜರಾತಿ ಸಹಿತ ಪೂರ್ಣ ನಡವಳಿಯ ಜೆರಾಕ್ಸ್ ಪ್ರತಿಯ ಪ್ರತಿಯೊಂದು ಪುಟವನ್ನು ಧೃಢೀಕರಿಸಿ ಕಳುಹಿಸಲು ಕೋರಿ ಮಾನ್ಯ ಪ್ರಾದೇಶಿಕ ಆಯುಕ್ತರು ಉಲ್ಲೇಖದ ಪತ್ರವನ್ನು ತಮಗೆ ಕಳುಹಿಸಿರುತ್ತಾರೆ.

ತಮ್ಮ ಮಾಹಿತಿಗಾಗಿ ದಿನಾಂಕ 07.10.2016ರಂದು ಪ್ರಕಟಿಸಿದ ಕರಡು ಮತದಾರರ ಪಟ್ಟಿಗಳನ್ನು ಈಗಾಗಲೇ ಮಿಂಚಂಚೆ ಮೂಲಕ ಕಳುಹಿಸಲಾಗಿದೆ.

ಆದ್ದರಿಂದ ತಮ್ಮ ವ್ಯಾಪ್ತಿಯಲ್ಲಿರುವ ಸೌಹಾರ್ದ ಸಹಕಾರಿಗಳು ಪರಿಶೀಲನೆಗಾಗಿ ತಮ್ಮ ಆಡಳಿತ ಮಂಡಲಿಯ ನಡವಳಿಗಳ ಮೂಲ ವಹಿಯನ್ನು ತಮ್ಮ ಕಛೇರಿಗೆ ಸಲ್ಲಿಸಿದಾಗ, ಸಂಯುಕ್ತ ಸಹಕಾರಿಯ ಚುನಾವಣೆಗೆ ಡೆಲಿಗೇಟ್ ಆಯ್ಕೆಯ ಕುರಿತು ನಡೆದ ಆಡಳಿತ ಮಂಡಲಿ ಸಭೆಯ ಹಾಜರಾತಿ ಮತ್ತು ನಡವಳಿಗಳನ್ನು ಪರಿಶೀಲಿಸಿ, ಹಾಜರಾತಿ ಮತ್ತು ನಡವಳಿಯ ಎಲ್ಲಾ ಪುಟಗಳನ್ನು ಧೃಢೀಕರಿಸಿ, ಮೊಹರಿನೊಂದಿಗೆ ಸಹಿ ಮಾಡಿ ಕಳುಹಿಸಿಕೊಡಲು ಈ ಮೂಲಕ ವಿನಂತಿ.

ವಂದನೆಗಳೊಂದಿಗೆ,

Karnataka State Souharda Federal Cooperative Ltd.
Reg. No.
RSR / SOU / ACT / 136 /
Regn 051 / 2001-02
dated : 04-01-2002
Bangalore

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ